

# ಸೋದರರ ಯುಗಳ

**ಗಾಂಧಿನಗರದಲ್ಲಿ ಸುದ್ದಿ ಮಾಡುತ್ತಿರುವ ಯುವ ಪ್ರತಿಭೆಗಳ ಸುಗ್ಗಿಯ ಹೊಸ ಫಸಲು ‘ಜವ’. ಈ ಚಿತ್ರದ ನಿರ್ದೇಶಕ ಅಭಯ್‌ಚಂದ್ರ ಹಾಗೂ ಸಂಗೀತ ಸಂಯೋಜಕ ವಿನಯ್‌ಚಂದ್ರ ಸಹೋದರರು!**

‘ಚಿತ್ರಮಂದಿರದಲ್ಲಿ ಇಪ್ಪತ್ತು ನಿಮಿಷ ಕಳೆದರೆ ಸಾಕು. ಇಪ್ಪತ್ತೊಂದನೇ ನಿಮಿಷದಿಂದ ನೀವು ಚಿತ್ರದ ಭಾಗವೇ ಆಗಿರುತ್ತೀರಿ’. ಇದು ಯುವ ನಿರ್ದೇಶಕ ಅಭಯ್‌ಚಂದ್ರ ಅವರ ವಿಶ್ವಾಸದ ಮಾತು. ಅವರ ನಿರ್ದೇಶನದ ‘ಜವ’ ಚಿತ್ರ ಇದೀಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ.

‘ಜವ’ ಒಂದು ಮಿಸ್ಟರಿ ಥ್ರಿಲ್ಲರ್. ಪ್ರೇಕ್ಷಕರು ಮಾತ್ರವಲ್ಲ, ಅಭಯ್ ಕೂಡ ಈಗ ಥ್ರಿಲ್ಲಿಂಗ್ ಅನುಭವದಲ್ಲಿದ್ದಾರೆ. ತನ್ನ ಚಿತ್ರದ ಬಿಡುಗಡೆ ಸಮೀಪಿಸಿದಂತೆಲ್ಲ ನಿರ್ದೇಶಕನೊಬ್ಬ ಅನುಭವಿಸುವ ಪುಲಕ ಹಾಗೂ ಆತಂಕದ ಸಮ್ಮಿಶ್ರಭಾವವದು.

ಥ್ರಿಲ್ಲರ್ ಸಿನಿಮಾಗಳು ಕನ್ನಡ ಚಿತ್ರರಂಗಕ್ಕೆ ಹೊಸತೇನಲ್ಲ. ಹಾಗೆಂದು ನಮ್ಮ ಸಿನಿಮಾ ಹತ್ತರಲ್ಲಿ ಹನ್ನೊಂದು ಎನ್ನಬಹುದಾದ ಚಿತ್ರವಲ್ಲ. ‘ಜವ’ ಪ್ರೇಕ್ಷಕರನ್ನು ಕುರ್ಚಿಯ ತುದಿಯಲ್ಲಿ ಕೂಡಿಸುತ್ತದೆ. ಇದು ಪ್ರೇಕ್ಷಕರ ಮೆದುಳಿನೊಂದಿಗೆ ಆಟವಾಡುವ ಸಿನಿಮಾ. ಚಿತ್ರ ನೋಡುತ್ತಾ ನೋಡುತ್ತಾ ಪ್ರೇಕ್ಷಕ ಕೂಡ ಸಿನಿಮಾದ ಭಾಗವಾಗಿಬಿಡುತ್ತಾನೆ. ನಾನು ಈ ಸಂದರ್ಭದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದೆ ಎಂದು ನೋಡುಗ ಪಾತ್ರಗಳೊಂದಿಗೆ ಹಾಗೂ ಕಥೆಯೊಂದಿಗೆ ತನ್ನನ್ನು ಸಮೀಕರಿಸಿಕೊಳ್ಳುತ್ತಾನೆ ಎನ್ನುತ್ತಾರೆ ಅಭಯ್.

ನಿರ್ದೇಶಕನಾಗಿ ಅಭಯ್ ತಮ್ಮನ್ನು ಒಂದೇ ಬಗೆಯ ಕಥನಗಳಿಗೆ, ಪ್ರಯೋಗಗಳಿಗೆ ಸೀಮಿತಗೊಳಿಸಲು ಬಯಸುವವರಲ್ಲ. ‘ನಿರ್ದೇಶಕನಿಗೆ ಎಲ್ಲ ಬಗೆಯ ರುಚಿ ಇರಬೇಕು’ ಎನ್ನುವುದು ಅವರ ನಂಬಿಕೆ. ಬಿ.ಎಸ್ಸಿ ಓದಿರುವ ಅವರು ಅಪ್ಪ–ಅಮ್ಮನ ಆಸೆಯಂತೆ ಎಂಬಿಎ ಮುಗಿಸಿದ್ದಾರೆ. ಕಾಲೇಜು ದಿನಗಳಲ್ಲೇ ಸಿನಿಮಾ ತನ್ನ ಕ್ಷೇತ್ರ ಎನ್ನುವುದು ಅವರಿಗೆ ಸ್ಪಷ್ಟವಾಗಿತ್ತು. ವಿದ್ಯಾಭ್ಯಾಸದ ನಂತರ ಅವರು ಸಿನಿಮಾದಲ್ಲೇ ಭವಿಷ್ಯ ಅರಸುತ್ತಿದ್ದಾರೆ. ಈ ನಿಟ್ಟಿನಲ್ಲಿ ‘ಜವ’ ಅವರು ಬರೆದಿರುವ ಹೊಸ ಪರೀಕ್ಷೆ!

ಓರ್ವ ಪೊಲೀಸ್ ಅಧಿಕಾರಿ ಹಾಗೂ ಕೆಲವು ವ್ಯಕ್ತಿಗಳ ನಡುವೆ ಒಂದು ರಾತ್ರಿಯಲ್ಲಿ ನಡೆಯುವ ಕಥೆ ಚಿತ್ರದಲ್ಲಿದೆ. ಈ ಕಥೆಯನ್ನು ಸಿದ್ಧಪಡಿಸಲು ನಿರ್ದೇಶಕರು ಒಂದೂವರೆ ವರ್ಷ ತೆಗೆದುಕೊಂಡಿದ್ದಾರಂತೆ. ಸಾಯಿಕುಮಾರ್, ದಿಲೀಪ್ ರಾಜ್, ಭವಾನಿ ಸೇರಿದಂತೆ ಹಲವು ಪ್ರತಿಭಾವಂತರು ತಾರಾಗಣದಲ್ಲಿದ್ದಾರೆ.

ಪೂರ್ಣ ಪ್ರಮಾಣದಲ್ಲಿ ಚಿತ್ರರಂಗದಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಅಭಯ್ ತಮ್ಮ ಅಣ್ಣ ವಿನಯ್‌ಚಂದ್ರ ಜೊತೆ ಸೇರಿ ಸಂಸ್ಥೆಯೊಂದನ್ನು ಹುಟ್ಟುಹಾಕಿದ್ದಾರೆ. ಅಣ್ಣತಮ್ಮಂದಿರಿಬ್ಬರೂ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತವರು. ಕರ್ನಾಟಕಿ, ಹಿಂದೂಸ್ತಾನಿ ಸಂಗೀತದ ಪಾಠ ಹೇಳಿಸಿಕೊಂಡಿದ್ದಾರೆ. ಅಭಯ್ ಗಾಯಕರೂ ಹೌದು. ‘ಜವ’ ಚಿತ್ರದಲ್ಲಿ ಒಂದು ಗೀತೆಯನ್ನೂ ಹಾಡಿದ್ದಾರೆ.

ತಮ್ಮನ ನಿರ್ದೇಶನದ ಸಿನಿಮಾಕ್ಕೆ ವಿನಯ್ ಸಂಗೀತ ನೀಡಿದ್ದಾರೆ. ಥ್ರಿಲ್ಲರ್ ಕಥನಗಳಲ್ಲಿ ಸಂಗೀತ ಪ್ರಮುಖ ಪಾತ್ರ ವಹಿಸುತ್ತದೆ. ‘ಜವ’ ಚಿತ್ರದಲ್ಲಂತೂ ಸಂಗೀತ ಕಥೆಗೆ ಆತ್ಮದ ರೂಪದಲ್ಲಿ ಪರಿಣಮಿಸಿದೆ ಎನ್ನುವುದು ಸಹೋದರರ ಅನಿಸಿಕೆ.

ವಿನಯ್ ಈಗಾಗಲೇ ಕೆಲವು ಚಿತ್ರಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ತಮ್ಮನ ಇಶಾರೆಗೆ ತಕ್ಕಂತೆ ಕೆಲಸ ಮಾಡಿದ ಅನುಭವ ಅವರಿಗೆ ಖುಷಿ ಕೊಟ್ಟಿದೆ.

‘ಜವ’ದ ಬೆನ್ನಿಗೆ ಅಭಯ್ ನಿರ್ದೇಶನದ ಹೊಸ ಚಿತ್ರದ ಕೆಲಸವೂ ಚಾಲ್ತಿಯಲ್ಲಿದೆ. ಹಿರಿಯ ನಟ ಶಿವರಾಜ್‌ಕುಮಾರ್ ಚಿತ್ರವನ್ನು ನಿರ್ದೇಶಿಸುವ ಮೂಲಕ ಅವರು ತಮ್ಮ ವೃತ್ತಿಜೀವನದಲ್ಲೊಂದು ಮೆಟ್ಟಿಲು ಜಿಗಿಯುತ್ತಿದ್ದಾರೆ. ‘ಬ್ಲಾಕ್ ಸಿ ನಂ. 135’ ಶೀರ್ಷಿಕೆಯ ಈ ಚಿತ್ರ ಆ್ಯಕ್ಷನ್ ಥ್ರಿಲ್ಲರ್ ಕಥೆ ಒಳಗೊಂಡಿದೆಯಂತೆ.

■ ರಘು